

# ಪ್ರೀತಿ ಷರತ್ತು ರಹಿತ ಆಗಿರಬೇಕೆ?

**ಅಪ್ಪ–ಅಮ್ಮನ ಬದುಕಿನ ಕೇಂದ್ರದಲ್ಲಿ ಮಕ್ಕಳಿರುವುದು ಸಹಜ. ಸಮಸ್ಯೆ ಇರುವುದು ಮಕ್ಕಳ ಜೀವನದ ಕೇಂದ್ರದಲ್ಲಿ ಪೋಷಕರು ಇರಬೇಕೆನ್ನುವ ಬಯಕೆಯಲ್ಲಿ.**

■ ಸ್ವಯಂಪ್ರಭಾ

‘ಬಿಗ್ ಬಾಸ್’ ಎಂಟನೇ ಸೀಸನ್‌ನ ಆಯ್ಕೆ ಪ್ರಕ್ರಿಯೆಯಲ್ಲಿ ಮೂವರು ಸ್ಪರ್ಧಿಗಳಷ್ಟೇ ಉಳಿದಿದ್ದರು. ಅರವಿಂದ್, ಮಂಜು ಪಾವಗಡ ಮತ್ತು ದಿವ್ಯಾ ಉರುಡುಗ. ಮನೆಯೊಳಗೆ ಕುಳಿತಿದ್ದ ಸ್ಪರ್ಧಿಗಳನ್ನು ಶೋ ನಡೆಸಿಕೊಡುತ್ತಿದ್ದ ಸುದೀಪ್ ಒಂದಾದ ಮೇಲೊಂದು ಪ್ರಶ್ನೆಗಳನ್ನು ಕೇಳುತ್ತಿದ್ದರು.

‘ಮಂಜು, ಯಾರು ಬಿಗ್ ಬಾಸ್ ಟ್ರೋಫಿ ಗೆಲ್ತಾರೆ ಅಂದ್ಕೋತೀರಿ?’

‘ನಾನೇ ಗೆಲ್ತೀನಿ ಸರ್’ ಮಂಜು ಅವರದು ಆತ್ಮವಿಶ್ವಾಸದ ಉತ್ತರ.

‘ದಿವ್ಯಾ ಉರುಡುಗ, ಯಾರು ಗೆಲ್ಲಬೇಕು ಅಂತೀರಿ’

‘ನಾನೇ ಅರ್ಹಳು ಸರ್’ ದಿವ್ಯಾ ಅವರ ಉತ್ತರ.

‘ಅರವಿಂದ್, ಯಾರು ಗೆಲ್ಲಬೇಕು?’

ಅರವಿಂದ್ ಉತ್ತರ ಭಿನ್ನವಾಗಿತ್ತು: ‘ದಿವ್ಯ ಗೆಲ್ಬೇಕು ಸರ್’.

ಸಭೆಯಲ್ಲಿ ಕುಳಿತಿದ್ದ ಅರವಿಂದ್ ಅವರ ಅಮ್ಮ ಇರುಸುಮುರುಸಾದ ಒಂದು ಸೆಕೆಂಡ್‌ನ ಚಿತ್ರವೊಂದು ಕಾಣಿಸಿತು. ಮಗನ ಯಶಸ್ಸನ್ನು ನೋಡಬೇಕು ಎಂದು ಕುಳಿತ ಅಮ್ಮನಿಗೆ, ಮಗನ ಉತ್ತರ ಕೇಳಿ ತುಸು ಗಲಿಬಿಲಿ ಆಗಿರಬಹುದು. ಆದರೆ ಅರವಿಂದ್ ಅವರ ಪಾಲಿಗೆ, ಅದೊಂದು ಸಹಜ ಉತ್ತರವಾಗಿತ್ತು ಎನಿಸುತ್ತದೆ.

ಹೌದು. ಅಪ್ಪ ಅಮ್ಮನ ಜೀವನದ ಕೇಂದ್ರವೇ ಮಕ್ಕಳಾಗಿರುತ್ತಾರೆ. ಮಕ್ಕಳನ್ನು ಕೇಂದ್ರವಾಗಿರಿಸಿಕೊಂಡು ಅವರು ಇಡೀ ಜಗತ್ತನ್ನು ನೋಡುತ್ತಾರೆ. ಪ್ರತಿ ನಿರ್ಧಾರ, ಪ್ರತಿ ಹೆಜ್ಜೆ ಮಕ್ಕಳ ಏಳಿಗೆಯ ಉದ್ದೇಶವನ್ನೇ ಇರಿಸಿಕೊಂಡದ್ದಾಗಿರುತ್ತದೆ. ಪೋಷಕರ ಈ ಧೋರಣೆಯು ಅವರ ವೈಯಕ್ತಿಕ ಜೀವನವನ್ನು ಮತ್ತು ಸಾಮಾಜಿಕ ಜೀವನವನ್ನು ರೂಪಿಸುತ್ತದೆ. ಅದು ವ್ಯಕ್ತಿಯೊಬ್ಬನ ಸಕಾರಾತ್ಮಕವಾದ ಜೀವನಶೈಲಿಗೆ ಪ್ರೇರಣೆಯೂ ಹೌದು.

ಎಷ್ಟೋ ಸಂದರ್ಭಗಳಲ್ಲಿ ಮಕ್ಕಳ ಜೀವನದ ಕೇಂದ್ರ ತಾವೇ ಆಗಿರಬೇಕು ಎಂದು ಪೋಷಕರೇ ಬಯಸುವುದೂ ಉಂಟು. ‘ನಿನಗಾಗಿ ಎಲ್ಲ ಸೌಕರ್ಯಗಳನ್ನು ಕಲ್ಪಿಸಿದ್ದೇವೆ. ಆದ್ದರಿಂದ ನೀನು ಉತ್ತಮ ಹುದ್ದೆಯನ್ನು ಏರುವಷ್ಟರ ಮಟ್ಟಿಗೆ ಶಿಕ್ಷಣ ಮಾಡಬೇಕು’ ಎಂದು ಒತ್ತಾಯಿಸುವಾಗ, ‘ಶೇ 95ಕ್ಕಿಂತ ಹೆಚ್ಚು ಅಂಕ ತೆಗೆಯಲು ಸಾಧ್ಯವಾಗಲಿಲ್ಲ ಎಂದರೆ ಹೇಗೆ ಮಗಾ? ಮತ್ತೆ ನಾವು ಅಪ್ಪ ಅಮ್ಮ ಸೇರಿ ಹೀಗೆ ದುಡಿದು ತಂದು ನಿನಗೆ ಓದಲು ಅವಕಾಶ ಮಾಡಿಕೊಟ್ಟಿದ್ದಾದರೂ ಯಾಕೆ?’ ಎಂದು ಮಕ್ಕಳನ್ನು ದಬಾಯಿಸುವುದನ್ನು ನೋಡುವಾಗ, ಈ ವಿಚಾರ ಮುನ್ನಲೆಗೆ ಬರುತ್ತದೆ. ತಮ್ಮ ನಿರೀಕ್ಷೆಗಳೇ ಮಕ್ಕಳ ಜೀವನದ ಕೇಂದ್ರವಾಗಿರಬೇಕು ಎಂದು ಬಯಸುವ ಪೋಷಕರು ಬೇಗನೇ ನಿರಾಶೆಗೊಳಗಾಗಬಹುದು.

‘ನಾವು ಮಕ್ಕಳಿಗಾಗಿ ಇಷ್ಟೆಲ್ಲ ತ್ಯಾಗ ಮಾಡಿದ್ದೇವೆ, ಶ್ರಮಪಟ್ಟಿದ್ದೇವೆ, ಆದ್ದರಿಂದ ಮಕ್ಕಳೂ ನಮ್ಮ ಅಗತ್ಯಗಳನ್ನು ಅವರ ಜೀವನದ ಕೇಂದ್ರವಾಗಿರಿಸಿಕೊಳ್ಳಬೇಕು’ ಎಂದು ನಿರೀಕ್ಷೆ ಮಾಡುವುದರಿಂದ ಮಕ್ಕಳ ಮನಸ್ಸಿನಲ್ಲಿ ಗೊಂದಲ ಮೂಡುತ್ತದೆ. ಈ ಜೀವಜಗತ್ತು ಮುಂದುವರೆಯುವ ಚಕ್ರದಂತಿರುತ್ತದೆ. ಎಲ್ಲ ಜೀವಿಗಳಿಗೂ ಮಕ್ಕಳೇ ಜೀವನದ ಕೇಂದ್ರಬಿಂದು ಆಗಿರುತ್ತಾರೆಯೇ ಹೊರತು, ಇತರರು ಯಾರೂ ಕೇಂದ್ರವಾಗಿರುವುದಿಲ್ಲ. ಹಾಗಾಗಿ ಜೀವನಚಕ್ರದ ಸಾಗುವಿಕೆಗೆ ಪೂರಕವಾಗಿಯೇ ಎಲ್ಲರೂ ಯೋಚಿಸುವುದು ಸಹಜ.

ಇದೊಂದು ಸರಳವಾದ ವಿವೇಚನಾಗೆರೆ. ಶ್ರಮಿಕಾಳಿಗೂ ಒಮ್ಮೆ ಹಾಗೆಯೇ ಗೊಂದಲ ಮೂಡಿತ್ತು. ಉತ್ತಮ ಕಂಪನಿಯೊಂದರಲ್ಲಿ ಉದ್ಯೋಗ ಸಿಕ್ಕಿದಾಗ ಹರ್ಷಗೊಂಡಿದ್ದ ಅವಳಿಗೆ ವಿದೇಶದಲ್ಲಿ ಕೆಲಸ ಮಾಡುವ ಅವಕಾಶ ಅರಸಿಕೊಂಡು ಬಂತು. ಅವಕಾಶವನ್ನು ತ್ಯಾಗ ಮಾಡಿ, ಅಪ್ಪ ಅಮ್ಮನ ಜೊತೆಗಿರಬೇಕೇ ಅಥವಾ ವಿದೇಶಕ್ಕೆ ಹೋಗಿಬಿಡಲೇ ಎಂದು ದೀರ್ಘವಾಗಿ ಯೋಚನೆ ಮಾಡಿದ್ದಳು. ಕೊನೆಗೂ ಗೊಂದಲ ಬಗೆಹರಿಯದೆ ಸಮಾಲೋಚಕರ ಬಳಿ ತೆರಳಿದಳು. ಸಮಾಲೋಚಕರು ಈ ಸಂದಿಗ್ಧವನ್ನೂ ಶ್ರಮಿಕಾಳ ಸೂಕ್ಷ್ಮ ಮನಸ್ಥಿತಿಯನ್ನೂ ಗಮನಿಸಿ ಸಲಹೆ ನೀಡಿದರು: ‘ಮಕ್ಕಳು ತಮ್ಮ ಜೀವನವನ್ನು ಸ್ವತಂತ್ರವಾಗಿ ನಿಭಾಯಿಸುತ್ತ, ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲಿ ಎನ್ನುವುದು ಹೆತ್ತವರ ಆಶಯವಾಗಿರುತ್ತದೆ. ನೀನು ಬದುಕಿನಲ್ಲಿ ಸದೃಢಳಾಗುವುದು ಅವರ ಅಂತರಂಗದ ಆಶಯ. ಉಳಿದಂತೆ ದೂರವಿರಬಾರದು ಎನ್ನುವ ಮೋಹವೊಂದು ಇಲ್ಲ ಎಂದೇನೂ ಅಲ್ಲ. ಪ್ರೀತಿಯಿದ್ದಲ್ಲಿ, ಅಗಲುವ ಭಯ, ನೋವು ಇದ್ದೇ ಇರುತ್ತದೆ. ಆದರೆ ವಾಸ್ತವಿಕ ಸತ್ಯಗಳೇ ನಿರ್ಣಯಗಳಿಗೆ ಆಧಾರವಾಗಿರಬೇಕು’ ಎಂದವರು ಹೇಳಿದರು. ಆಗ ಶ್ರಮಿಕಾಳಿಗೆ ತನ್ನ ಯೋಚನೆಯ ದಿಕ್ಕು ಸ್ಪಷ್ಟವಾಗತೊಡಗಿತು.

ಮಕ್ಕಳು ತಮ್ಮ ಜೀವನ ದಾರಿಯನ್ನು ಹುಡುಕಿಕೊಳ್ಳುವಾಗ ಅವರ ಮೇಲೆ ಋಣಭಾರದ ಮೂಟೆಯನ್ನು ಹೊರಿಸುವುದು ಸರಿಯಲ್ಲ. ಹಿರಿಯರ ಗಾದೆ ಮಾತೊಂದು ನೆನಪಾಗುತ್ತದೆ, ‘ಅವರವರ ತುತ್ತಿಗೆ, ಅವರವರೇ ಹೊಣೆ’. ಈ ಮಾತಿಗೆ ತಕ್ಕಂತೆ ಸೃಷ್ಟಿಯ ನಿಯಮಗಳು ರೂಪುಗೊಂಡಿವೆ ಎನಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in